


ಹೀರೋಯಿನ್ ಉಡುಪು ಇಷ್ಟಿದ್ದರೆ ಸಾಕೆ? ಆಮೇಲೆ ಆಕ್ಷೇಪಣೆ ಮಾಡಬೇಡಿ!




ನಾನೂ ಆ ರೀತಿ ಶಾಲೆಗೆ ಹೋಗಬೇಕಾಗುತ್ತೇನಮ್ಮಾ?







ನನ್ನ ಬೇಡಿಕೆ ಈಡೇರಿದ ಮೇಲೆ... ನಿಮ್ಮ ಜೊತೆಗೆ ಸೇರುತ್ತೇನೆ..!







ಏಯ್.. ಮೂದೇವಿ– ಏಳು! ಭಿಕ್ಷೆ ಬೇಡೋಕೆ ಹೋಗಾಕಿಲ್ವಾ?

ಛೇ! ಎಂತ ಕೆಲ್ಸ ಮಾಡ್ದೆ.. ನಾನು 'ಕನ್ನಡದ ಕೋಟ್ಯಧಿಪತಿ'ಯಲ್ಲಿ 'ಕೋಟಿ ರೂಪಾಯಿ' ಪ್ರಶ್ನೆಗೆ ಉತ್ತರಿಸ್ತಾ ಇದ್ದೆ.. ಎಬ್ಬಿಸಿಬಿಟ್ಟೆಯಲ್ಲಾ..!

### ಹೀಗೊಂದು ವಿಶ್ಲೇಷಣೆ

ಟೀ.ವಿ.ಯಲ್ಲಿ ಸದಾ 'ಎಕ್ಸ್‌ಪರ್ಟ್ ಕಮೆಂಟ್ರಿ' ನೀಡುವ ವಿಶ್ಲೇಷಣಾಕಾರರೊಬ್ಬರು ವಿಮಾನದಲ್ಲಿ ಬೆಂಗಳೂರಿನಿಂದ ಸಿಂಗಾಪುರಕ್ಕೆ ಪ್ರಯಾಣಿಸುತ್ತಿದ್ದರು.

ವಿಮಾನ 'ಟೇಕಾಫ್' ಆದ ಸ್ವಲ್ಪ ಹೊತ್ತಿನಲ್ಲೇ ಪೈಲಟ್ ಅನೌನ್ಸ್ ಮಾಡಿದ– 'ಏರೋಪ್ಲೇನ್‌ನ ಒಂದು ಇಂಜಿನ್ ಈಗ ತಾನೆ ಕೆಟ್ಟಿದೆ. ಹಾಗೆಂದು ಪ್ರಯಾಣಿಕರು ಗಾಬರಿ ಪಡುವ ಅಗತ್ಯವಿಲ್ಲ. ಇನ್ನೂ 3 ಇಂಜಿನ್‌ಗಳು ಕೆಲಸ ಮಾಡುತ್ತಿವೆ. ಆದರೆ ಒಂದು ಗಂಟೆಯ ಬದಲಾಗಿ ಈಗ ನಮ್ಮ ಪ್ರಯಾಣದ ಅವಧಿ 7 ಗಂಟೆಯಾಗುತ್ತದೆ, ಅಷ್ಟೆ.'

ಸ್ವಲ್ಪ ಹೊತ್ತಿನ ನಂತರ ಮತ್ತೊಮ್ಮೆ ಪೈಲಟ್



ಅನೌನ್ಸ್ ಮಾಡಿದ: 'ವಿಮಾನದ ಎರಡನೇ ಇಂಜಿನ್ ಕೂಡಾ ಈಗ ಕೈ ಕೊಟ್ಟಿದೆ. ಇನ್ನೂ ಎರಡು ಇಂಜಿನ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಈಗ ನಮ್ಮ ಪ್ರಯಾಣದ ಅವಧಿ 10 ಘಂಟೆಯಾಗುತ್ತದೆ, ಚಿಂತೆಯಿಲ್ಲ.'

ಅರ್ಧ ಘಂಟೆ ನಂತರ ಪುನಃ ಪೈಲಟ್ ಇಂಟರ್‌ಕಾಮ್‌ನಲ್ಲಿ ಬಂದು– 'ವಿಮಾನದ ಮೂರನೇ ಇಂಜಿನ್ ಕೂಡಾ ಕೆಲಸ ನಿಲ್ಲಿಸಿದೆ. ಉಳಿದ ಒಂದೇ ಇಂಜಿನ್‌ನಲ್ಲಿಯೂ ವಿಮಾನ ಸುರಕ್ಷಿತವಾಗಿ ಹಾರಬಲ್ಲದು. ಆದರೆ ನಮ್ಮ ಪ್ರಯಾಣದ ಅವಧಿ 18 ಗಂಟೆಯದಾಗಿರುತ್ತದೆ ಅಷ್ಟೆ' ಎಂದು ಹೇಳಿದ.

ವಿಶ್ಲೇಷಣಾಕಾರ ಪಕ್ಕದಲ್ಲಿ ಕುಳಿತಿದ್ದ ಸ್ನೇಹಿತನಿಗೆ ಹೇಳಿದ: 'ಕೊನೇ ಎಂಜಿನ್ ಕೂಡಾ ಕೈಕೊಡದಿದ್ದರೆ ಸಾಕು. ಕೊನೇ ಎಂಜಿನ್ ಕೂಡಾ ಕೈಕೊಟ್ಟರೆ ನಾವು ಆಕಾಶದಲ್ಲೇ ಪರ್ಮನೆಂಟಾಗಿ ತೇಲುತ್ತಿರಬೇಕಾಗುತ್ತದೆ.. ಅಲ್ವೆ!'

★★★

### ಜಂಕ್ಷನ್‌ನಲ್ಲಿ ಡ್ರೈವಿಂಗ್

ರಂಗಣ್ಣ ಕಾರ್ ಡ್ರೈವಿಂಗ್ ಮಾಡುವಾಗ ಪ್ರತೀ ಜಂಕ್ಷನ್ ಬಂದಾಗಲೂ ತುಂಬಾ ಸ್ಪೀಡಾಗಿ ಓಡಿಸುತ್ತಿದ್ದ. ಜಂಕ್ಷನ್ ದಾಟಿದ ಮೇಲೆ ನಿಧಾನವಾಗಿ ಕಾರು ಚಲಾಯಿಸುತ್ತಿದ್ದ.

ಹಿಂದಿನ ಸೀಟಿನಲ್ಲಿ ಕುಳಿತಿದ್ದ ಸ್ನೇಹಿತ ಗುಂಡಣ್ಣ 'ಯಾಕ್ರೀ ರಂಗಣ್ಣ ಹೀಗ್ ಮಾಡ್ತಿದೀರಿ?' ಎಂದರು.

'ನೋಡಿ ಗುಂಡಣ್ಣ, ಒಂದು ವಿಶ್ಲೇಷಣೆಯ ಪ್ರಕಾರ ಈ ಜಂಕ್ಷನ್‌ಗಳಲ್ಲಿ ಆಕ್ಸಿಡೆಂಟ್ ಆಗುವ ಸಾಧ್ಯತೆಗಳು ತುಂಬಾ ಜಾಸ್ತಿ. ಅದಕ್ಕೇ ನಾನು ಜಂಕ್ಷನ್‌ಗಳಲ್ಲಿ ಜಾಸ್ತಿ ಸಮಯ ಕಳೆಯಲು ಬಯಸುವುದಿಲ್ಲ. ಸ್ಪೀಡಾಗಿ ದಾಟಿ ಬಂದುಬಿಡುತ್ತೇನೆ' ಎಂದ ರಂಗಣ್ಣ!

ಸಂಗ್ರಹ: ನಾಗರಾಜ. ವೈ.ಎಸ್. ಬೆಂಗಳೂರು